ಕಥೆ




## ಮಣಿಕಂಠ ಗೊದಮನಿ

ಕಲೆ: ಸುರೇಶ್ ಆರ್. ಅರ್ಕಸಾಲಿ


# ನೆರಳು



ಬಿಸಿಲೆಂದರೆ ಬಿಸಿಲು...! ಡಾಂಬಾರು ರಸ್ತೆಗಳೆಲ್ಲ ಪಾದಗಳಿಗೆ ಅಂಟಿಕೊಳ್ಳುವಷ್ಟು ಕಾವೇರಿವೆ. ಜೋಡುಗಳಿಲ್ಲದೆ ಬರಿಗಾಲಲ್ಲಿ ನಡೆದು ಹೋಗುವ ಹಾಗಿಲ್ಲ. ಅದರ ಹೊಡೆತಕ್ಕೆ ಸಿಕ್ಕ ಮೈ-ಮುಖವೆಲ್ಲ ಕೆಂಪಡರುವಂತೆ, ರಸ್ತೆಬದಿಯ ತುಂಬು ಯೌವ್ವನದ ಗಿಡಗಳು ತ್ರಾಣ ಕಳೆದುಕೊಳ್ಳುವಂತೆ, ಪ್ರಾಣಿ-ಪಕ್ಷಿಗಳ ಚೈತನ್ಯವನ್ನೇ ಹೀರಿಬಿಡುವ ಪ್ರತಿಜ್ಞೆ ಮಾಡಿದಂತೆ ತನ್ನ ಅಟ್ಟಹಾಸವನ್ನು ಅದು ಮೆರೆಯುತ್ತಿರುವಾಗ, ಇನ್ನು ನೇರವಾಗಿ ಮುಗಿಲಿಗೇ ಇದಿರಾಗಿ ನಿಲ್ಲುವ ನನ್ನ ಬೋಳು ನೆತ್ತಿಗೇನು ಬಿಸಿಲೆಂದರೆ ಉಮೇದಿಯೇ? ಅದಕ್ಕೂ ಅಷ್ಟೇ!; ಮೇಲೊಂದು ಛತ್ರಿಯ ಸುಳಿವಿರಲೇಬೇಕು. ಇದೆಲ್ಲ ಮೊದಲೇ ಊಹಿಸಿದವನಂತೆ ಜೊತೆಗೊಂದು ಛತ್ರಿ ಇರಿಸಿಕೊಂಡು ಬಂದಿದ್ದೆ. ಆ ಹಳ್ಳಿಯಲ್ಲಿ ಅಷ್ಟಾಗಿ ಬಸ್ಸುಗಳ ವ್ಯವಸ್ಥೆಯೂ ಇಲ್ಲ. ತುರ್ತು ಕೆಲಸಕ್ಕೆ ಸ್ವಂತ ಗಾಡಿ ಬಿಟ್ಟರೆ ಪಾದಯಾತ್ರೆಯೇ ಗತಿ.

ಹೀಗೆ ನನ್ನದ್ದಲ್ಲದ ಈ ಊರು 'ಸತಿಪುರ'ದಲ್ಲಿ ಛತ್ರಿ ಹಿಡಿದು ನಡೆಯುತ್ತಿರುವಾಗ ತನ್ನೂರಲ್ಲಿ ಇಷ್ಟೇನು ಬಿಸಿಲಿನ ಆರ್ಭಟವಿಲ್ಲ ಎಂದು ಒಳಮನಸ್ಸು ಗುನುಗಿಕೊಳ್ಳುತ್ತಿತ್ತು. ಆದರೇನು? ಅಲ್ಲಿ ನಡೆದು ಹೋಗಲೇಬೇಕಾದ ಅನಿವಾರ್ಯವಿತ್ತು. ಇರುವ ನಾಲ್ಕೂ ಹೆಣ್ಣುಮಕ್ಕಳಲ್ಲಿ ಈಗ ಕೊನೆಯವಳಿಗೆ ಗಂಡು ಹುಡುಕುವ ಸರದಿ. ನಾನು ಮಾಸ್ತರಿಕೆಯಿಂದ ನಿವೃತ್ತಿ ಹೊಂದಿದ ಮೇಲೆ ನನ್ನ ಸೇವಿಂಗ್ಸ್ ಮತ್ತು ರಿಟೈರ್‌ಮೆಂಟ್ ದುಡ್ಡೆಲ್ಲವೂ ಮೊದಲ ಮೂರು ಹೆಣ್ಣುಮಕ್ಕಳ ಮದುವೆ ಖರ್ಚಿಗೇ ಹೋದವು. ಈಗ ಅವರಿಗೆ ಕೊಟ್ಟಷ್ಟು ವರದಕ್ಷಿಣೆಯನ್ನೂ ಇವಳಿಗೆ ನೀಡುವಷ್ಟು ಹಣವಿಲ್ಲ. ಇದೆಲ್ಲ ನನ್ನನ್ನು ಇಡಿಯಾಗಿ ಬಾಧಿಸುವಾಗ ಪರಿಚಯದವರೊಬ್ಬರು- 'ಸತಿಪುರ ದಾಟಿ ಮುಂದಕ್ಕೆ ಹೋದರೆ ಅಲ್ಲೊಂದು ಸಣ್ಣ ಪಟ್ಟಣವಿದೆ. ಅಲ್ಲೊಬ್ಬ ನಿಮ್ಮದೇ ಜಾತಿಯ, ದುಡಿಮೆಯಲ್ಲೂ ಮುಂದಿರುವ ಒಳ್ಳೆಯ ಮನೆತನದ ಹುಡುಗನಿದ್ದಾನೆ. ವರದಕ್ಷಿಣೆಗೇನೂ ಆಸೆ ಪಡಲಾರರು. ನೀವೊಮ್ಮೆ ವಿಚಾರಿಸಿ ನೋಡಿ' ಎಂಬುದಾಗಿ ಹೇಳಿದರು. ನನಗೂ ಸರಿಯೆನಿಸಿ ಒಪ್ಪಿ ಹೊರಟೆ.

ಸತಿಪುರದ ರಸ್ತೆಗಳಲ್ಲಿ ಸೆಕೆ ತಾಳಲಾರದೆ ಸುಡು ಬೇಸಿಗೆಗೆ ಛೀಮಾರಿ ಹಾಕುತ್ತಾ ಹೋಗುತ್ತಿದ್ದ